ಹೇಳಿದರು.

ಹಿರಿಯರು–ವೃದ್ಧರು ಜಗಳವಾಡುತ್ತಿದ್ದರು, ಹುಡುಗರು ಅವರನ್ನು ತಡೆಯಲು ಪ್ರಯತ್ನಿಸುತ್ತಿದ್ದರು. ಆದರೆ ಮಾರ್ಕೋನ ಸಹೋದರಿ ತನ್ನ ತಂದೆಯ ಪರ ವಹಿಸಿ ತಮ್ಮ ದೊಡ್ಡಪ್ಪನನ್ನು ನಿಂದಿಸಿದಾಗ ಜಗಳ ಇನ್ನೊಂದು ಪೀಳಿಗೆಯ ಸದಸ್ಯರಿಗೆ ಹಸ್ತಾಂತರವಾಯಿತು.

‘ಹೇ... ಹೇ...’ ದೊಡ್ಡಪ್ಪನ ಇಬ್ಬರು ಮಕ್ಕಳು ಸಬರೀನಾರನ್ನು ದುರುಗುಟ್ಟಿ ನೋಡಿದರು.

ಅಲಿಸಾ ತಮ್ಮ ಮಕ್ಕಳ ಪರವಾಗಿ ಕೂಡಲೇ ಮುಂದೆ ಬಂದಳು. ಮಾರ್ಕೋಗೂ ಸಹೋದರಿಯ ಪರವಾಗಿ ಮಾತನಾಡುವಂತೆ ಕರೆಕೊಟ್ಟಳು. ಮಾರ್ಕೋ ಪ್ರವೇಶದಿಂದಾಗಿ ಜಗಳ ತನ್ನ ನಿಯಂತ್ರಣವನ್ನು ಕಳೆದುಕೊಂಡಿತು. ಚಿಕ್ಕಪ್ಪನ ಸಹೋದರ–ಸಹೋದರಿ ಸಹ ರೇಗಿದರು. ಪಾಂಡವರು–ಕೌರವರಂತೆ ಇಡೀ ಪರಿವಾರ ಎರಡು ಭಾಗವಾಗಿ ಹಂಚಿತು. ಕೆಲವು ಸದಸ್ಯರು ತಟಸ್ಥವಾಗಿ ನಿಂತಿದ್ದರು.

ಮಾರ್ಕೋನ ಚಿಕ್ಕಪ್ಪನ ಸೊಸೆ ವ್ಯಗ್ರತೆಯಿಂದ ಹೇಳಿದಳು, ‘ನಾವು ಅಷ್ಟು ದೂರದ ಆಸ್ಟ್ರೇಲಿಯಾದಿಂದ ಜಗಳವಾಡಲು ಬಂದಿಲ್ಲ. ಈ ಜಗಳವನ್ನು ನಿಲ್ಲಿಸಿ.’

ಬಿಸಿ ರಕ್ತ! ನಿಲ್ಲುವ ಲಕ್ಷಣಗಳೇ ಕಾಣ ಬರುತ್ತಿರಲಿಲ್ಲ. ಕೈಕೈ ಹತ್ತಿ ಹೊಡೆದಾಡುವ ಮಟ್ಟಕ್ಕೂ ಹೋಯಿತು. ಪಾಪ್‌ಕಾರ್ನ್ ತಿನ್ನುತ್ತಿದ್ದ ನನ್ನ ಕೈಗಳು ನಿಂತವು. ಹಿರಿಯರು ಭಯಗೊಂಡರು. ಎಲ್ಲರೂ ತಮ್ಮ ತಮ್ಮ ಮಕ್ಕಳ ಕೈಗಳನ್ನು ಹಿಡಿದು, ಅವರು ಹೊಡೆದಾಡುವುದನ್ನು ತಡೆದರು. ಆದರೆ ಜಗಳ ಮತ್ತು ಹೊಡೆದಾಟ ನಿಲ್ಲುವಂತೆ ಕಾಣಲಿಲ್ಲ.

ಮಾರ್ಕೋನ ಕಸಿನ್ ಬ್ರದರ್‌ನ ಹೆಂಡತಿ ಗರ್ಭಿಣಿಯಾಗಿದ್ದು, ಅವಳಿಗೆ ಒಂಬತ್ತು ತಿಂಗಳಾಗಿತ್ತು. ಅವಳು ಇದ್ದಕ್ಕಿದ್ದಂತೆ ಎಲ್ಲರ ಮೇಲೆ ರೇಗಿ ಗಟ್ಟಿಯಾಗಿ, ‘ಸ್ಟಾಪ್ ಇಟ್!’ ಎಂದು ಕಿರುಚಿದಳು. ಅವಳು ಅಕಸ್ಮಾತ್ ತನ್ನ ಹೊಟ್ಟೆಯನ್ನು ಹಿಡಿದು ಸೋಫಾದಲ್ಲಿ ಕುಸಿದು ಮಲಗಿ, ಏದುಸಿರು ಬಿಡಲಾರಂಭಿಸಿದಳು. ಅವಳ ಗಂಡ ಅವಳ ಸಮೀಪಕ್ಕೆ ಬಂದ. ಅವಳಿಗೆ ಆಸರೆಯನ್ನು ಕೊಡುತ್ತಾ ಕೈಯೆತ್ತಿ ಗದರಿದ, ‘ಸೈಲೆನ್ಸ್! ನನ್ನ ಹೆಂಡತಿಯ ಆರೋಗ್ಯ ಹದಗೆಡುತ್ತಿದೆ. ಯಾರೂ ಜಗಳ ಮಾಡಬಾರದು, ಉಸಿರು ಸಹ ಬಿಡಬಾರದು!’

ಇನ್ನಿಬ್ಬರು ಗರ್ಭಿಣಿಯರು ಸಹ ತಮ್ಮ ಹೊಟ್ಟೆಯನ್ನು ಹಿಡಿದುಕೊಂಡರು.

ಎಲ್ಲರೂ ಭಯದಿಂದ ಮೌನ ವಹಿಸಿದರು. ಮಾರ್ಕೋನ ಕಿರಿಯ ಚಿಕ್ಕಪ್ಪ ಕೈಯನ್ನು ಎತ್ತುತ್ತಾ ಹೇಳಿದರು, ‘ಈ ಬಾರಿಯೂ ಆಸ್ತಿಯ ವಿಷಯ ಬಗೆಹರಿಯಲಿಲ್ಲ. ತುಂಬಾ ಕಷ್ಟಪಟ್ಟು ಎಲ್ಲರೂ ಸೇರಿದ್ದೆವು...’

‘ಆಸ್ತಿ ತುಂಬಾ ಇದೆಯೇ?’ ನಾನು ಕುತೂಹಲದಿಂದ ಕೇಳಿದೆ. ಅವರು ತಲೆಯಾಡಿಸಿದರು. ನಾನು ಮೆಲ್ಲನೆ ಮುಗುಳ್ನಕ್ಕೆ.

ಆದರೆ ಈಗ ಎಲ್ಲರ ಗಮನ, ಕೆಳಗೆ ಬಿದ್ದು ಪ್ರಜ್ಞೆ ಕಳೆದುಕೊಂಡಿದ್ದ ಸೊಸೆಯ ಮೇಲೆ ಹರಿಯಿತು.

## ಕಳೆದ ಸಂಚಿಕೆಯಲ್ಲಿ



ಮಾರ್ಕೋ ಪರಿಚಯದೊಂದಿಗೆ ನ್ಯಾನ್ಸಿಯ ಜೀವನದಲ್ಲಿ ಹೊಸ ಕನಸುಗಳು ಮೊಳೆಯತೊಡಗಿದವು. ತನಗಿಂತಲೂ ಕಿರಿಯ ವಯಸ್ಸಿನ ಮಾರ್ಕೋ ಸ್ನೇಹಿತನಾಗಿ ಇಷ್ಟನಾದರೂ, ಆ ಸ್ನೇಹದ ನವಿರು ನಂಟಾಗಿ ಪರಿವರ್ತನೆಗೊಳ್ಳಲು ಹೆಚ್ಚು ಸಮಯ ಬೇಕಾಗಲಿಲ್ಲ. ಹೊಸ ಸಂಬಂಧವನ್ನು ಒಪ್ಪಿಕೊಳ್ಳುವ ಮೊದಲು ನ್ಯಾನ್ಸಿ ಸಾಕಷ್ಟು ಯೋಚಿಸಿದಳು. ಕೊನೆಗೆ ಮನಸಿನ ಮೋಹನ ಮುರಲಿಯ ಕರೆಗೆ ಅವಳು ಓಗೊಡಲೇಬೇಕಾಯಿತು. ಮದುವೆ ಬೇಡವೆಂದರೂ ನ್ಯಾನ್ಸಿಯ ಅಪೇಕ್ಷೆಯ ಮೇರೆಗೆ ಮಾರ್ಕೋ ವಿವಾಹದ ಸಂಬಂಧಕ್ಕೆ ಒಪ್ಪಿಕೊಂಡ. ಮದುವೆ ಅದ್ದೂರಿಯಾಗಿಯೇ ನಡೆಯಿತು. ಹೊಸ ಬದುಕಿನ ನಿರೀಕ್ಷೆಯೊಂದಿಗೆ ನ್ಯಾನ್ಸಿ ಮಾರ್ಕೋನೊಂದಿಗೆ ಫ್ರಾನ್ಸ್‌ಗೆ ಬಂದಳು. ವಯಸ್ಸಾದ ನಂತರವೂ ಗಂಡ–ಹೆಂಡತಿಗೆ ಪ್ರೈವಸಿ ಅಗತ್ಯ ಎಂದು ನಂಬಿದ್ದ ಮಾರ್ಕೋನ ತಂದೆ–ತಾಯಿ ಅವಳ ಗಮನಸೆಳೆದರು.

ಯಾರೋ ಓಡಿ ಹೋಗಿ ಗ್ಲಾಸಿನಲ್ಲಿ ನೀರು ತಂದರು. ಯಾರೋ ಹಣ್ಣಿನ ರಸವನ್ನು ಕೊಟ್ಟರು. ಬಿಸಿ ಬಿಸಿ ಕಾಫಿ ಸಹ ಬಂತು. ಒಬ್ಬರು ಅವಳ ಅಂಗೈ ಮತ್ತು ಹಿಮ್ಮಡಿಯನ್ನು ತಿಕ್ಕಿದರು. ಅವಳ ಗಂಡ ‘ಥ್ಯಾಂಕ್ಸ್!’ ಎಂದ.

‘ಬರ್ ಪೈನ್‌ನಲ್ಲಿದ್ದಾರಾ?’ ಯಾರೋ ಕೇಳಿದರು.

‘ಬಹುಶಃ’ ಎಂದು ಯಾರೋ ಹೇಳಿದರು.

ಪರಸ್ಪರ ಜಗಳವಾಡುತ್ತಿದ್ದವರು, ಈಗ ಸ್ವಲ್ಪ ನಾಚಿದರು. ಶೀಘ್ರವೇ ಸೌಹಾರ್ದದ ವಾತಾವರಣ ಮೂಡಿತು. ‘ಪಾರ್ಡನ್’, ‘ಎಕ್ಸ್‌ಕ್ಯೂಸ್ ಮೀ’, ‘ಸ್ಸಾರಿ’ ಎಂದು ಎಲ್ಲರೂ ಪರಸ್ಪರ ಕ್ಷಮೆ ಯಾಚಿಸಿದರು. ನೀವು ಕೆಲಸವನ್ನು ಹೇಗೆ ಆರಂಭಿಸುತ್ತೀರಿ ಎಂಬುದು ಮುಖ್ಯವಲ್ಲ, ನೀವು ಅದನ್ನು ಹೇಗೆ ಅಂತ್ಯಗೊಳಿಸುತ್ತೀರಿ ಎಂಬುದು ಮುಖ್ಯ; ಕೊನೆಯಲ್ಲಿ ಒಳಿತಾದರೆ, ಎಲ್ಲವೂ ಒಳಿತೇ ಆಗುವುದು. ಎಲ್ಲರೂ ತುಂಬಾ ಶಿಷ್ಟತೆಯಿಂದ ಪರಸ್ಪರ ತಬ್ಬಿಕೊಂಡು ಬೀಳ್ಕೊಂಡರು. ಈ ಪಾರಿವಾರಿಕ–ಮಿಲನಕ್ಕೆ ಪರಸ್ಪರ ಧನ್ಯವಾದಗಳನ್ನು ಹೇಳಿಕೊಂಡರು. ಮುಂದಿನ ಪಾರಿವಾರಿಕ ಮಿಲನದಲ್ಲಿ ಮತ್ತೆ ಭೇಟಿಯಾಗೋಣ ಎಂದು ಮಾತು ಕೊಟ್ಟರು. ಬೇರೊಂದು ದೇಶದಲ್ಲಿ ನಾವು ನಮ್ಮ ಒಂದು ಡೆಸ್ಟಿನೇಶನ್ ಫ್ಯಾಮಿಲಿ ರಿಯೂನಿಯನ್ ಆಚರಿಸೋಣ ಎಂಬ ಸಲಹೆಗಳೂ ಬಂದವು.

ನಾನು ಲೆರಾಯ್ ಪರಿವಾರದಿಂದ ಪ್ರಭಾವಿತಳಾದೆ. ನನ್ನ ಪತಿಯೊಂದಿಗೆ ಮನೆಗೆ ಮರಳಿ ಬಂದೆ.

ಮರುದಿನ ನಮಗೆ, ಆ ಸೊಸೆ ಬೆಳಿಗ್ಗೆ ಐದು ಗಂಟೆ, ಹತ್ತು ನಿಮಿಷಕ್ಕೆ ಪುತ್ರನಿಗೆ ಜನ್ಮ ನೀಡಿರುವ ಸುದ್ದಿ ತಿಳಿಯಿತು. ಮತ್ತೊಂದು ಜೀವ ಲೆರಾಯ್ ಪರಿವಾರಕ್ಕೆ ಬಂದು ಸೇರಿತು.

ನಾವು ಒಂದು ವಾರ ನಮ್ಮ ಅತ್ತೆ–ಮಾವನೊಂದಿಗೆ ಕಳೆದು ಕೋಪನ್‌ಹೇಗನ್‌ಗೆ ಮರಳಿ ಬಂದೆವು. ಅದು ಮಾರ್ಕೋ ಪರಿವಾರದಲ್ಲಿ ನನ್ನ ಪ್ರಥಮ ಮತ್ತು ಅಂತಿಮ ಫ್ಯಾಮಿಲಿ ರಿಯೂನಿಯನ್ ಸಮಾರಂಭದಲ್ಲಿ ಭಾಗವಹಿಸಿದ ಘಟನೆಯಾಗಿತ್ತು. ತದನಂತರ ಹೋಗಬೇಕಾದ ಸಂದರ್ಭ ಬಂದಾಗ ಮಾರ್ಕೋ ಒಂಟಿಯಾಗಿಯೇ ಹೋದ. ಅವನು ನನಗೆ ಜೊತೆಯಲ್ಲಿ ಬರಲು ಸಹ ಹೇಳಲಿಲ್ಲ.

***

ಈಗ... ಮೂರನೆಯ ಪತಿಯೊಂದಿಗೆ ನನ್ನ ಜೀವನ ಆರಂಭವಾಗಿತ್ತು. ತುಂಬಾ ಬುದ್ಧಿವಂತಿಕೆಯಿಂದ ಮಾರ್ಕೋನೊಂದಿಗೆ ನನ್ನ ಸಂಬಂಧಗಳನ್ನು ಕಟ್ಟಿಕೊಳ್ಳಲು ಆರಂಭಿಸಿದೆ. ಮನುಷ್ಯ ಸಂಬಂಧವೊಂದರಿಂದ ಇನ್ನೊಂದು ಸಂಬಂಧದೆಡೆಗೆ ಹೋದಾಗ, ಸಮಸ್ಯೆಗಳೆಲ್ಲವೂ ಕೊನೆಗೊಂಡವು ಎಂದು ಯೋಚಿಸುತ್ತಾನೆ. ಆದರೆ ಪ್ರತಿಯೊಂದು ಸಂಬಂಧದಲ್ಲಿ ಹೊಸ ಸಮಸ್ಯೆಗಳಿವೆ, ಹೊಸ ಒಪ್ಪಂದಗಳಿವೆ. ಯಾರೂ ಪರಿಪೂರ್ಣರಲ್ಲ. ಕಡೆಗೆ ವಿಷಯ ಹೊಂದಾಣಿಕೆ ಮಾಡಿಕೊಳ್ಳುವುದು, ಒಪ್ಪಂದಕ್ಕೆ ಒಳಗಾಗುವುದು ಮತ್ತು ಸಾಮರಸ್ಯವನ್ನು ಕಾಪಾಡಿಕೊಳ್ಳುವ ಹಂತಕ್ಕೇ ಬರುತ್ತದೆ.

ಪ್ರೀತಿಯಲ್ಲಿ ವಯಸ್ಸಿನ ಅಂತರಕ್ಕೆ ಅರ್ಥವಿಲ್ಲ. ಮಾರ್ಕೋನ ಸ್ಟ್ಯಾಮಿನಾ ಚೆನ್ನಾಗಿತ್ತು. ಅವನು ಉತ್ಸಾಹಿಯಾಗಿದ್ದ, ಶಕ್ತಿಸಂಪನ್ನನಾಗಿದ್ದ, ಅವನೊಂದಿಗೆ ಲವಲವಿಕೆಯನ್ನು ಮನಗಾಣಬಹುದಿತ್ತು. ಅವನು ವಾಸ್ತವವಾಗಿ ನನ್ನಲ್ಲಿ ನಾನು ಯುವತಿ ಎಂಬ ಭಾವನೆಯನ್ನು ಮೂಡಿಸಿದ. ಅವನು ನನ್ನ ತಿಳಿವಳಿಕೆ, ಜ್ಞಾನ, ಅನುಭವ ಮತ್ತು ದೃಷ್ಟಿಕೋನವನ್ನು ಪ್ರಶಂಸಿಸಿದ.

ಅದೃಷ್ಟದಿಂದ ನಾನು ವಿವಾಹದ ಮೊದಲ ತಿಂಗಳಿನಲ್ಲಿಯೇ ಗರ್ಭಧಾರಣೆ ಮಾಡಿದೆ. ಸುಮಾರು ಇಪ್ಪತ್ತು ವರ್ಷಗಳ ನಂತರ, ನಾನು ಮತ್ತೊಮ್ಮೆ ಮಾತೃತ್ವದಲ್ಲಿ ಪ್ರವೇಶಿಸುತ್ತಿದ್ದೆ. ನನ್ನ ಪ್ರೆಗ್ನೆನ್ಸಿ ಟೆಸ್ಟ್ ಪಾಸಿಟಿವ್ ಬಂದಾಗ ಮಾರ್ಕೋ